2019 ಕ.ತೀ.ವ 1632

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಡಾ॥ ರೇಖಾ –ವಿರುದ್ಧ– ಭಾರತದ ವೈದ್ಯಕೀಯ ಪರಿಷತ್ತು, ನವದೆಹಲಿ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಪ್ರತ್ಯರ್ಜಿದಾರರಾದ 5 ಮತ್ತು 6 ಆಗಿರುವಂತಹ ಡಾ॥ ರಾಮಲಿಂಗಪ್ಪ ಚನ್ನಬಸಪ್ಪ ಅಂತರತನಿಯವರು ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ (ಪ್ರಭಾರ) ಸೇವೆ ಸಲ್ಲಿಸುತ್ತಿರುವರು. ಅವರು ದಿನಾಂಕ: 4.06.2019ರ ಆದೇಶಕ್ಕೆ ಪ್ರತ್ಯುತ್ತರವಾಗಿ ಅಫಿಡಾವಿಟ್‌ನ್ನು ದಾಖಲಿಸಿರುವರು. ಅವರು ದಾಖಲಿಸಿದ ಅಫಿಡಾವಿಟ್‌ನ ನಿರ್ದಿಷ್ಟ ಅಂಶಗಳು, ಒಟ್ಟಾರೆಯಾಗಿ ಅಸಂಗತತೆಯಿಂದ ಕೂಡಿದೆ ಎಂದು ಅಪಾದಿಸಿ, ಅಗತ್ಯವಾಗಿ ಅದನ್ನು ಸರಿಪಡಿಸಬೇಕೆಂದು ಕೋರಿ ಈ ಅರ್ಜಿಯನ್ನು ದಾಖಲಿಸಲಾಗಿದೆ.

ದಿನಾಂಕ: 4.6.2019ರ ಆದೇಶವನ್ನು ಉಲ್ಲೇಖಿಸುವುದರೊಂದಿಗೆ ದಾಖಲಿಸಿದ ಅಫಿಡಾವಿಟ್‌ನ ಅಂಶಗಳು ಹೀಗಿದೆ. ದಾಖಲಿಸಿದ ಅಫಿಡಾವಿಟ್ ಔಪಚಾರಕತೆಯಿಂದ ಕೂಡಿರುವುದು ಕಂಡು ಬರುತ್ತವೆ ಮತ್ತು ಅದರಲ್ಲಿ ಅರ್ಜಿದಾರರಾದ ರೇಖಾ ಕೋಂ ಅರುಣ್ ವಾಲವೇಕರ್ ಅವರು 2014ನೇ ವರ್ಷದಲ್ಲಿ ಔಷಧ ವಿಜ್ಞಾನದಲ್ಲಿ ಎಂ.ಡಿ. ಅಧ್ಯಯನಕ್ಕಾಗಿ ಅರ್ಹತೆಯನ್ನು ಪಡೆದಿರುವ ಸಂಬಂಧದಲ್ಲಿ, ಯಾವುದೇ ವಿವರಣೆ ಮತ್ತು ಎಂ.ಡಿ. ಔಷಧಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿದ್ದು

*ರಿಟ್ ಅರ್ಜಿ ಸಂಖ್ಯೆ: 105632/2018, ದಿನಾಂಕ 11ನೇ ಸೆಪ್ಟೆಂಬರ್, 2019.

ಅದಕ್ಕನುಸಾರವಾಗಿ ಅವರಿಗೆ ಪ್ರಮಾಣಪತ್ರವನ್ನು ಜಾರಿ ಮಾಡದಿರುವ ಸಂಬಂಧದಲ್ಲಿ ಯಾವುದೇ ವಿಚಾರವು ಅಫಿಡಾವಿಟ್ಟಿನಲ್ಲಿ ಕಂಡು ಬರುವುದಿಲ್ಲ. ಈ ಸಂಬಂಧದಲ್ಲಿ ಅರ್ಜಿದಾರರು ಮಾಡಿದ ವಾದ ಮತ್ತು ಪ್ರಾರ್ಥನೆಯಲ್ಲಿ ಪ್ರತ್ಯರ್ಜಿದಾರರ 5 ಮತ್ತು 6 ಅವರ ಸಂಸ್ಥೆಯಲ್ಲಿ ದಿನಾಂಕ: 29.6.2014ರಂದು ಔಷಧಿ ವಿಜ್ಞಾನದ ಎಂ.ಡಿ.ಗೆ ಪ್ರವೇಶವನ್ನು ಪಡೆದಿರುತ್ತಾರೆ. ಅರ್ಜಿದಾರರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿನ 3ನೇ ಸುತ್ತಿನಲ್ಲಿ ಸ್ನಾತಕೋತ್ತರ ಪದವಿಯ ಪ್ರವೇಶಕ್ಕಾಗಿ ಅರ್ಹತೆಯನ್ನು ಪಡೆದಿದ್ದು ಮತ್ತು ಈ ಅನುಮೋದಿತ ಖಾಲಿಇರುವ ಸ್ಥಾನಕ್ಕೆ ಅರ್ಜಿದಾರರು ಪ್ರವೇಶವನ್ನು ಪಡೆದಿರುತ್ತಾರೆ.

ಸದರಿ ವ್ಯಾಸಂಗಕ್ಕೆ ದಿನಾಂಕ: 29.06.2014ರಂದು ಅರ್ಜಿದಾರರು ಪ್ರವೇಶವನ್ನು ಪಡೆದಿರುತ್ತಾರೆ. ವ್ಯಾಸಂಗದ ಅವಧಿಯು ದಿನಾಂಕ: 30.6.2014ರಿಂದಲೇ ಪ್ರಾರಂಭವಾಗಿರುತ್ತದೆ. ವ್ಯಾಸಂಗ ಪ್ರಾರಂಭವಾದ ನಂತರದಲ್ಲಿ ಪ್ರತ್ಯರ್ಜಿದಾರ ಸಂಖ್ಯೆ: 7 ಅವರು ಸದರಿ ಸಂಸ್ಥೆಯಲ್ಲಿ ದಿನಾಂಕ: 07.07.2014 ರಂದು ಔಷಧಿ ವಿಜ್ಞಾನದ ಸ್ನಾತಕೋತ್ತರ ಪದವಿಗೆ ಪ್ರವೇಶವನ್ನು ಪಡೆದಿರುತ್ತಾರೆ. ಈ ಎರಡನೇ ಸ್ನಾತಕೋತ್ತರ ಪದವಿ ಸೀಟನ್ನು ಭಾರತ ವೈದ್ಯಕೀಯ ಪರಿಷತ್ತು (ಭಾ.ವೈ.ಪ) ಮಾನ್ಯ ಮಾಡಬೇಕಿರುತ್ತದೆ ಎಂದು ಈ ನ್ಯಾಯಾಲಯದ ಮುಂದೆ ಪ್ರಸ್ತುತ ಸದರಿ ಸಂಸ್ಥೆಯ ನಿರ್ದೇಶಕರು (ಪ್ರಭಾರ) ಆಗಿರುವ ಪ್ರತ್ಯರ್ಜಿದಾರ 5 ಮತ್ತು 6ರವರು ಹೇಳಿಕೆ ನೀಡಿರುತ್ತಾರೆ. ಆ ಮೂಲಕ ಇಲ್ಲಿನ ಅರ್ಜಿದಾರರ ಪ್ರವೇಶಾತಿಯು ಅಂಗೀಕೃತಗೊಂಡ ಸೀಟಿಗೆ ಎಂದು ಸೂಚಿಸಲಾಗಿದೆ ಮತ್ತು ಪ್ರತ್ಯರ್ಜಿದಾರರ ಅವರ ಪ್ರವೇಶಾತಿಯಲ್ಲಿ ಭಾರತ ವೈದ್ಯಕೀಯ ಪರಿಷತ್ತಿನ ಮಾನ್ಯತೆ ಬಾಕಿ ಇರುವಾಗಲೇ ಮಾಡಿಕೊಂಡ ಪ್ರವೇಶಾತಿ ಆಗಿರುತ್ತದೆ. ಮುಂದುವರೆದು ನೋಡಿದಾಗ, ಅರ್ಜಿದಾರರು ಮತ್ತು 7ನೇ ಪ್ರತ್ಯರ್ಜಿದಾರ ಇವರಿಬ್ಬರೂ ತಮ್ಮ ಸ್ನಾತಕೋತ್ತರ ಪದವಿಯ ವ್ಯಾಸಂಗವನ್ನು ದಿನಾಂಕ: 09.07.2017ರಂದು ಪೂರ್ಣಗೊಳಿಸಿರುತ್ತಾರೆ ಮತ್ತು ತದನಂತರದಲ್ಲಿ ಮಾನ್ಯತಾ ಪ್ರಮಾಣಪತ್ರವನ್ನು ನೀಡಬೇಕೆಂದು ಕೋರಿ ಅವರಿಬ್ಬರು ಅರ್ಜಿಯನ್ನು ದಾಖಲಿಸಿರುವರು. ಈ ನಿಟ್ಟಿನಲ್ಲಿ ಈ ವಸ್ತುವಿಷಯದಲ್ಲಿ, ಅರ್ಜಿದಾರಳು ದಾಖಲಿಸಿದ ಪ್ರಸ್ತುತ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ತತ್ಪರಿಣಾಮವಾಗಿ, ಅನುಬಂಧಗಳಾದ ಎಫ್ ಮತ್ತು ಎಫ್ 1 ಅನ್ನು ವಜಾಗೊಳಿಸಲಾಗಿದೆ ಮತ್ತು 7ನೇ ಪ್ರತ್ಯರ್ಜಿದಾರಳಿಗೆ ಹೊರಡಿಸಿದ ಅಧಿಕೃತ ಪ್ರಮಾಣಪತ್ರವನ್ನು ಹಿಂಪಡೆಯಬೇಕೆಂದು 5ನೇ ಮತ್ತು 6ನೇ ಪ್ರತ್ಯರ್ಜಿದಾರ

**ಮತ್ತು ಭಾರತೀಯ ವೈದ್ಯಕೀಯ ಪರಿಷತ್ತುಗೆ ನಿರ್ದೇಶಿಸಲಾಗಿದೆ ಮತ್ತು ಆ ಆದೇಶದ ಪ್ರತಿ ಸ್ವೀಕೃತಿಯಾದ ದಿನಾಂಕದಿಂದ 15 ದಿನಗಳೊಳಗಾಗಿ ಪೂರ್ವಾನ್ವಯ ಪರಿಣಾಮವಾಗಿ ಅರ್ಜಿದಾರಳಿಗೆ ಅಧಿಕೃತ ಪ್ರಮಾಣಪತ್ರವನ್ನು ನೀಡಲು ನಿರ್ದೇಶಿಸುತ್ತದೆ.**

ಅರ್ಜಿದಾರರ ಪರ : ಶ್ರೀ ಕೆ.ಎಲ್. ಪಾಟೀಲ್, ವಕೀಲರ ಪರವಾಗಿ ಶ್ರೀ ಎಸ್.ಎ. ಸುಂದರ್, ವಕೀಲರು.

1 ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ನುರುದ್ದೀನ್ ಕೆಟ್ಟೆ, ವಕೀಲರು.

2ನೇ ಮತ್ತು 3ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ವೀಣಾ ಹೆಗಡೆ, ಎ.ಜಿ.ಎ,

4ನೇ ಪ್ರತ್ಯರ್ಜಿದಾರರ ಪರ : ಶ್ರೀ ಶಿವಕುಮಾರ್ ಎಸ್. ಬಾದವಾಡಗಿ, ವಕೀಲರು

5ನೇ ಮತ್ತು 6ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿದ್ಯಾಶಂಕರ್ ಜಿ. ದಳವಾಯಿ ಮತ್ತು ಟಿ.ಎಚ್. ಅವಿನ್.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

ಪ್ರತ್ಯರ್ಜಿದಾರರಾದ 5 ಮತ್ತು 6 ಆಗಿರುವಂತಹ ಡಾ॥ ರಾಮಲಿಂಗಪ್ಪ ಚನ್ನಬಸಪ್ಪ ಅಂತರತನಿಯವರು ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ (ಪ್ರಭಾರ) ಸೇವೆ ಸಲ್ಲಿಸುತ್ತಿರುವರು. ಅವರು ದಿನಾಂಕ: 4.06.2019ರ ಆದೇಶಕ್ಕೆ ಪ್ರತ್ಯುತ್ತರವಾಗಿ ಅಫಿಡಾವಿಟ್‌ನ್ನು ದಾಖಲಿಸಿರುವರು. ಅವರು ದಾಖಲಿಸಿದ ಅಫಿಡಾವಿಟ್‌ನ ನಿರ್ದಿಷ್ಟ ಅಂಶಗಳು, ಒಟ್ಟಾರೆಯಾಗಿ ಅಸಂಗತತೆಯಿಂದ ಕೂಡಿದೆ ಎಂದು ಅಪಾದಿಸಿ, ಅಗತ್ಯವಾಗಿ ಅದನ್ನು ಸರಿಪಡಿಸಬೇಕೆಂದು ಕೋರಿ ಈ ಅರ್ಜಿಯನ್ನು ದಾಖಲಿಸಲಾಗಿದೆ.

2. ದಿನಾಂಕ: 4.6.2019ರ ಆದೇಶವನ್ನು ಉಲ್ಲೇಖಿಸುವುದರೊಂದಿಗೆ ದಾಖಲಿಸಿದ ಅಫಿಡಾವಿಟ್‌ನ ಅಂಶಗಳು ಹೀಗಿದೆ. ದಾಖಲಿಸಿದ ಅಫಿಡಾವಿಟ್ ಔಪಚಾರಕತೆಯಿಂದ

ಕೂಡಿರುವುದು ಕಂಡು ಬರುತ್ತವೆ ಮತ್ತು ಅದರಲ್ಲಿ ಅರ್ಜಿದಾರರಾದ ರೇಖಾ ಕೋಂ ಅರುಣ್ ವಾಲವೆಕರ್ ಅವರು 2014ನೇ ವರ್ಷದಲ್ಲಿ ಔಷಧ ವಿಜ್ಞಾನದಲ್ಲಿ ಎಂ.ಡಿ. ಅಧ್ಯಯನಕ್ಕಾಗಿ ಅರ್ಹತೆಯನ್ನು ಪಡೆದಿರುವ ಸಂಬಂಧದಲ್ಲಿ, ಯಾವುದೇ ವಿವರಣೆ ಮತ್ತು ಎಂ.ಡಿ. ಔಷಧಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿದ್ದು ಅದಕ್ಕನುಸಾರವಾಗಿ ಅವರಿಗೆ ಪ್ರಮಾಣಪತ್ರವನ್ನು ಜಾರಿ ಮಾಡದಿರುವ ಸಂಬಂಧದಲ್ಲಿ ಯಾವುದೇ ವಿಚಾರವು ಅಫಿಡಾವಿಟ್ಟಿನಲ್ಲಿ ಕಂಡು ಬರುವುದಿಲ್ಲ. ಈ ಸಂಬಂಧದಲ್ಲಿ ಅರ್ಜಿದಾರರು ಮಾಡಿದ ವಾದ ಮತ್ತು ಪ್ರಾರ್ಥನೆಯಲ್ಲಿ ಪ್ರತ್ಯರ್ಜಿದಾರರ 5 ಮತ್ತು 6 ಅವರ ಸಂಸ್ಥೆಯಲ್ಲಿ ದಿನಾಂಕ: 29.6.2014ರಂದು ಔಷಧಿ ವಿಜ್ಞಾನದ ಎಂ.ಡಿ.ಗೆ ಪ್ರವೇಶವನ್ನು ಪಡೆದಿರುತ್ತಾರೆ. ಅರ್ಜಿದಾರರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿನ 3ನೇ ಸುತ್ತಿನಲ್ಲಿ ಸ್ನಾತಕೋತ್ತರ ಪದವಿಯ ಪ್ರವೇಶಕ್ಕಾಗಿ ಅರ್ಹತೆಯನ್ನು ಪಡೆದಿದ್ದು ಮತ್ತು ಈ ಅನುಮೋದಿತ ಖಾಲಿಇರುವ ಸ್ಥಾನಕ್ಕೆ ಅರ್ಜಿದಾರರು ಪ್ರವೇಶವನ್ನು ಪಡೆದಿರುತ್ತಾರೆ.

3. ಸದರಿ ವ್ಯಾಸಂಗಕ್ಕೆ ದಿನಾಂಕ: 29.06.2014ರಂದು ಅರ್ಜಿದಾರರು ಪ್ರವೇಶವನ್ನು ಪಡೆದಿರುತ್ತಾರೆ. ವ್ಯಾಸಂಗದ ಅವಧಿಯು ದಿನಾಂಕ: 30.6.2014ರಿಂದಲೇ ಪ್ರಾರಂಭವಾಗಿರುತ್ತದೆ. ವ್ಯಾಸಂಗ ಪ್ರಾರಂಭವಾದ ನಂತರದಲ್ಲಿ ಪ್ರತ್ಯರ್ಜಿದಾರ ಸಂಖ್ಯೆ: 7 ಅವರು ಸದರಿ ಸಂಸ್ಥೆಯಲ್ಲಿ ದಿನಾಂಕ: 07.07.2014 ರಂದು ಔಷಧಿ ವಿಜ್ಞಾನದ ಸ್ನಾತಕೋತ್ತರ ಪದವಿಗೆ ಪ್ರವೇಶವನ್ನು ಪಡೆದಿರುತ್ತಾರೆ. ಈ ಎರಡನೇ ಸ್ನಾತಕೋತ್ತರ ಪದವಿ ಸೀಟನ್ನು ಭಾರತ ವೈದ್ಯಕೀಯ ಪರಿಷತ್ತು (ಭಾ.ವೈ.ಪ) ಮಾನ್ಯ ಮಾಡಬೇಕಿರುತ್ತದೆ ಎಂದು ಈ ನ್ಯಾಯಾಲಯದ ಮುಂದೆ ಪ್ರಸ್ತುತ ಸದರಿ ಸಂಸ್ಥೆಯ ನಿರ್ದೇಶಕರು (ಪ್ರಭಾರ) ಆಗಿರುವ ಪ್ರತ್ಯರ್ಜಿದಾರ 5 ಮತ್ತು 6ರವರು ಹೇಳಿಕೆ ನೀಡಿರುತ್ತಾರೆ. ಆ ಮೂಲಕ ಇಲ್ಲಿನ ಅರ್ಜಿದಾರರ ಪ್ರವೇಶಾತಿಯು ಅಂಗೀಕೃತಗೊಂಡ ಸೀಟಿಗೆ ಎಂದು ಸೂಚಿಸಲಾಗಿದೆ ಮತ್ತು ಪ್ರತ್ಯರ್ಜಿದಾರರ ಅವರ ಪ್ರವೇಶಾತಿಯಲ್ಲಿ ಭಾರತ ವೈದ್ಯಕೀಯ ಪರಿಷತ್ತಿನ ಮಾನ್ಯತೆ ಬಾಕಿ ಇರುವಾಗಲೇ ಮಾಡಿಕೊಂಡ ಪ್ರವೇಶಾತಿ ಆಗಿರುತ್ತದೆ. ಮುಂದುವರೆದು ನೋಡಿದಾಗ,

ಅರ್ಜಿದಾರರು ಮತ್ತು 7ನೇ ಪ್ರತ್ಯರ್ಜಿದಾರ ಇವರಿಬ್ಬರೂ ತಮ್ಮ ಸ್ನಾತಕೋತ್ತರ ಪದವಿಯ ವ್ಯಾಸಂಗವನ್ನು ದಿನಾಂಕ: 09.07.2017ರಂದು ಪೂರ್ಣಗೊಳಿಸಿರುತ್ತಾರೆ ಮತ್ತು ತದನಂತರದಲ್ಲಿ ಮಾನ್ಯತಾ ಪ್ರಮಾಣಪತ್ರವನ್ನು ನೀಡಬೇಕೆಂದು ಕೋರಿ ಅವರಿಬ್ಬರು ಅರ್ಜಿಯನ್ನು ದಾಖಲಿಸಿರುವರು.

4. ಇಲ್ಲಿನ ಅರ್ಜಿದಾರರ ದೂರು ಏನೆಂದರೆ, ಆಕೆಯ ಪಡೆದುಕೊಂಡಿದ್ದ ಪ್ರವೇಶಾತಿ ಲಭ್ಯವಿದ್ದ ಅಂಗೀಕೃತಗೊಂಡ ಸೀಟಿಗೆ ಮುಂಚಿತವಾಗಿಯೇ ತಾನು ಪ್ರವೇಶ ಪಡೆದಿರುವ ಕಾರಣದಿಂದಲೇ ಮಾನ್ಯತಾ ಪ್ರಮಾಣ ಪತ್ರಕ್ಕೆ ತನ್ನ ಪರವಾಗಿಯೇ 5ನೇ ಮತ್ತು 6ನೇ ಪ್ರತ್ಯರ್ಜಿದಾರರು ಮತ್ತು ಹಾಗೆಯೇ ಭಾ.ವೈ.ಪ. ಸಹ ತನ್ನನ್ನು ಮೊದಲು ಪರಿಗಣಿಸಬೇಕಾಗಿತ್ತು ಎಂಬುದು ಅರ್ಜಿದಾರರ ದೂರಾಗಿದೆ. ಆದರೆ ಅದಕ್ಕೆ ಪ್ರತಿಯಾಗಿ ಅರ್ಜಿದಾರ ಅರ್ಜಿಯನ್ನು ಕಡೆಗಣಿಸುವ ಮೂಲಕ 7ನೇ ಪ್ರತ್ಯರ್ಜಿದಾರರ ಅರ್ಜಿಯನ್ನು ಪರಿಗಣಿಸಿರುವುದು 5ನೇ ಮತ್ತು 6ನೇ ಪ್ರತ್ಯರ್ಜಿದಾರನಾಗಿರುವ ಸಂಸ್ಥೆಯು ಮತ್ತು ಅಂತೆಯೇ ಭಾ.ವೈ.ಪ. ಉದ್ದೇಶಪೂರ್ವಕವಾಗಿಯೇ ಎಸಗಿರುವ ತಪ್ಪು ಇದಾಗಿರುತ್ತದೆ ಎಂಬುದು ಅರ್ಜಿದಾರರ ವಾದಾಂಶವಾಗಿದೆ. ಈ ಸಂಬಂಧದಲ್ಲಿ ಈ ನ್ಯಾಯಾಲಯವು ಕೆಲವೊಂದು ಆದೇಶಗಳನ್ನು ಹೊರಡಿಸಿರುತ್ತದೆ. ಹೊರಡಿಸಿದ ಆದೇಶಗಳನ್ನು ಇದುವರೆವಿಗೂ ಯಾವುದೇ ಪ್ರಾಧಿಕಾರಗಳು ಅನುಷ್ಠಾನಗೊಳಿಸಿರುವುದಿಲ್ಲ. ದಿನಾಂಕ: 4.6.19ರಂದು ಹೊರಡಿಸಿದ ಆದೇಶದಲ್ಲಿ 5ನೇ ಮತ್ತು 6ನೇ ಪ್ರತ್ಯರ್ಜಿದಾರರಿಗೆ ಅರ್ಜಿದಾರರಿಗೆ ಯಾವ ಕಾರಣದ ಮೇಲೆ ಮೊದಲಿಗೆ ಮಾನ್ಯತಾ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಪರಿಗಣಿಸಿಲ್ಲ ಎಂಬುದಕ್ಕೆ ಅಫಿಡಾವಿಟ್ಟನ್ನು ದಾಖಲಿಸಿ ಎಂದು ಈ ನ್ಯಾಯಾಲಯವು ನಿರ್ದೇಶಿಸಿರುತ್ತದೆ. ಈ ಸಂಬಂಧದಲ್ಲಿ 5ನೇ ಮತ್ತು 6ನೇ ಪ್ರತ್ಯರ್ಜಿದಾರ ನಿರ್ದೇಶಕರು (ಪ್ರಭಾರ) ಇವರು ಅಫಿಡಾವಿಟ್ ಅನ್ನು ದಾಖಲಿಸಿರುವರು. ಆದರೆ ಆ ಅಫಿಡಾವಿಟ್‌ನಲ್ಲಿ ಮಾನ್ಯತಾ ಪ್ರಮಾಣಪತ್ರವನ್ನು ನೀಡದಿರುವ ಸಂಬಂಧದ ಬಗ್ಗೆ ಯಾವುದೇ ಬೆಳಕು ಚೆಲ್ಲುವುದಿಲ್ಲ. ಬದಲಿಗೆ ಭಾ.ವೈ.ಪ. ನಿಂದ ಅಂಗೀಕೃತಗೊಳ್ಳಬೇಕಾದ ಸೀಟಿಗೆ ಆಯ್ಕೆಗೊಂಡ 7ನೇ ಪ್ರತ್ಯರ್ಜಿದಾರಳಿಗೆ ಮಾನ್ಯತಾ ಪ್ರಮಾಣಪತ್ರವನ್ನು ನೀಡಿರುವ 5ನೇ ಮತ್ತು

6ನೇ ಪ್ರತ್ಯರ್ಜಿದಾರ ಮತ್ತು ಭಾ.ವೈ.ಪ. ಇವರಿಬ್ಬರೂ ಎಸಗಿರುವ ತಪ್ಪನ್ನು ಮುಚ್ಚಿಕೊಳ್ಳಲಷ್ಟೆ ಇಲ್ಲಿ ಪ್ರಯತ್ನಿಸಲಾಗಿದೆ.

5. ಆದುದರಿಂದ, ಈ ನ್ಯಾಯಾಲಯ ಭಾ.ವೈ.ಪ. ಅಧಿಕೃತ ಪ್ರಮಾಣಪತ್ರ ಹೊರಡಿಸುವುದಕ್ಕಾಗಿ 7ನೇ ಪ್ರತ್ಯರ್ಜಿದಾರಳ ಹೆಸರನ್ನು ಶಿಫಾರಸ್ಸು ಮಾಡುವುದಕ್ಕೆ 5 ಮತ್ತು 6ನೇ ಪ್ರತ್ಯರ್ಜಿದಾರರು ಅಳವಡಿಸಿಕೊಂಡ ಕಾರ್ಯ ವಿಧಾನ ಮತ್ತು ಪರಿಣಾಮವಾಗಿ, ಅಂದರೆ, ಇಲ್ಲಿನ ಅರ್ಜಿದಾರಳು ಸಲ್ಲಿಸಿದ ಅರ್ಜಿಯನ್ನು ಕಡೆಗಣಿಸಿ ಭಾರತೀಯ ವೈದ್ಯಕೀಯ ಪರಿಷತ್ತು ಸದರಿ ಪ್ರಮಾಣಪತ್ರವನ್ನು ನೀಡಿರುವುದು ವಾಸ್ತವ ಸನ್ನಿವೇಶಗಳ ಅಡಿಯಲ್ಲಿ ಅಗತ್ಯವಾಗಿ ಅನುಸರಿಸಬೇಕಾದ ಕಾರ್ಯ ವಿಧಾನವನ್ನು ಅನುಸರಿಸದಿರುವುದು ಎದ್ದುಕಾಣುವ ರೀತಿಯಲ್ಲಿ ಬರುತ್ತದೆ. ಇದು ಗಂಭೀರ ಪ್ರಮಾದದ ಕೃತ್ಯವಾಗಿರುತ್ತದೆ. ಪ್ರಾಸಂಗಿಕವಾಗಿ, 7ನೇ ಪ್ರತ್ಯರ್ಜಿದಾರಳ ಅರ್ಜಿಯನ್ನು ಅಂಗೀಕೃತಗೊಳಿಸುವುದಕ್ಕೆ ಪರಿಗಣಿಸಬೇಕಾಗಿತ್ತೋ ಅದಕ್ಕೆ ಬದಲಾಗಿ ವಿಪರ್ಯಯವಾಗಿರುವುದು ಈ ನ್ಯಾಯಾಲಯದ ಮುಂದಿನ ವಿಷಯವಾಗಿರುವುದಿಲ್ಲ, ಆ ಸಂಗತಿಯ ಬದಲಾಗಿ ಆಕೆಗೆ ಜಾರಿ ಮಾಡಲಾಗಿದೆ. 7ನೇ ಪ್ರತ್ಯರ್ಜಿದಾರಳ ಅರ್ಜಿಯನ್ನು ಅಧಿಕೃತ ಪ್ರಮಾಣಪತ್ರಕ್ಕಾಗಿ ಪರಿಗಣಿಸಿರುವುದರಲ್ಲಿ 5ನೇ ಮತ್ತು 6ನೇ ಪ್ರತ್ಯರ್ಜಿದಾರರ ಸಂಚಿನ ಕೈವಾಡವಾಗಿದೆ ಎಂದು ಇಲ್ಲಿ ಕಂಡುಬರುತ್ತದೆ.

6. ಈ ನಿಟ್ಟಿನಲ್ಲಿ ಈ ವಸ್ತುವಿಷಯದಲ್ಲಿ, ಅರ್ಜಿದಾರಳು ದಾಖಲಿಸಿದ ಪ್ರಸ್ತುತ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ತತ್ಪರಿಣಾಮವಾಗಿ, ಅನುಬಂಧಗಳಾದ ಎಫ್ ಮತ್ತು ಎಫ್ 1 ಅನ್ನು ವಜಾಗೊಳಿಸಲಾಗಿದೆ ಮತ್ತು 7ನೇ ಪ್ರತ್ಯರ್ಜಿದಾರಳಿಗೆ ಹೊರಡಿಸಿದ ಅಧಿಕೃತ ಪ್ರಮಾಣಪತ್ರವನ್ನು ಹಿಂಪಡೆಯಬೇಕೆಂದು 5ನೇ ಮತ್ತು 6ನೇ ಪ್ರತ್ಯರ್ಜಿದಾರ ಮತ್ತು ಭಾ.ವೈ.ಪ. ಗೆ ನಿರ್ದೇಶಿಸಲಾಗಿದೆ ಮತ್ತು ಆ ಆದೇಶದ ಪ್ರತಿ ಸ್ವೀಕೃತಿಯಾದ ದಿನಾಂಕದಿಂದ 15 ದಿನಗಳೊಳಗಾಗಿ ಪೂರ್ವಾನ್ವಯ ಪರಿಣಾಮವಾಗಿ ಅರ್ಜಿದಾರಳಿಗೆ ಅಧಿಕೃತ ಪ್ರಮಾಣಪತ್ರವನ್ನು ನೀಡಲು ನಿರ್ದೇಶಿಸುತ್ತದೆ.

7. ನಂತರದಲ್ಲಿ, 5ನೇ ಮತ್ತು 6ನೇ ಪ್ರತ್ಯರ್ಜಿದಾರರು 7ನೇ ಪ್ರತ್ಯರ್ಜಿದಾರಳ ಅರ್ಜಿಯನ್ನು, 5ನೇ ಮತ್ತು 6ನೇ ಪ್ರತ್ಯರ್ಜಿದಾರ ಸಂಸ್ಥೆಯು, 2014ರ ವರ್ಷಕ್ಕಾಗಿ ಔಷಧ ವಿಜ್ಞಾನದ ಎಂ.ಡಿ. ಪದವಿಗಾಗಿ 1ನೇ ಪ್ರತ್ಯರ್ಜಿದಾರ ಆಗಿರುವ ಭಾ.ವೈ.ಪ. ಹೆಚ್ಚುವರಿ ಸೀಟನ್ನು ಅನುಮೋದಿಸಿ ಅವಶ್ಯವಾಗಿ ಹೊರಡಿಸಿದ ಆದೇಶದ ತರುವಾಯ ಮಾತ್ರವೇ 7ನೇ ಪ್ರತ್ಯರ್ಜಿದಾರಳು ಅಧಿಕೃತ ಪ್ರಮಾಣಪತ್ರದ ನೀಡಿಕೆಗಾಗಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸತಕ್ಕದ್ದು.

8. ಈ ಸನ್ನಿವೇಶಗಳಲ್ಲಿ, ಮೇಲಿನ ಆದೇಶವನ್ನು ಆದಷ್ಟು ಬೇಗನೇ ಮೇಲಿನ ಉಲ್ಲೇಖಿತ 1ನೇ, 5ನೇ ಮತ್ತು 6ನೇ ಪ್ರತ್ಯರ್ಜಿದಾರರು ಅನುಷ್ಠಾನಗೊಳಿಸದಿದ್ದರೆ, ಅರ್ಜಿದಾರಳು 1ನೇ 5ನೇ ಮತ್ತು 6ನೇ ಪ್ರತ್ಯರ್ಜಿದಾರರು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇವರ ಜೊತೆಗೂಡಿದ 7ನೇ ಪ್ರತ್ಯರ್ಜಿದಾರರ ವಿರುದ್ಧ ನ್ಯಾಯಾಂಗ ನಿಂದನೆಯ ಅರ್ಜಿಯನ್ನು ದಾಖಲಿಸುವುದಕ್ಕೆ ಸ್ವತಂತ್ರ ಹೊಂದಿರುತ್ತಾಳೆ. ಅಲ್ಲದೆ, ಭಾ.ವೈ.ಪ. ಅಧಿಕೃತಗೊಳಿಸದ ಸೀಟಿಗೆ 7ನೇ ಪ್ರತ್ಯರ್ಜಿದಾರಳು ಪ್ರವೇಶಾತಿ ಪಡೆದಿರುವುದು ರುಜುವಾತಾಗಿದೆ ಪ್ರತಿಯಾಗಿ ಅರ್ಜಿದಾರಳ ಅಧಿಕೃತ ಪ್ರಮಾಣಪತ್ರವನ್ನು 7ನೇ ಪ್ರತ್ಯರ್ಜಿದಾರಳೇ ಪಡೆದಿರುವುದು ಸಹ ರುಜುವಾತಾಗುತ್ತದೆ. ಆದುದರಿಂದ ಅರ್ಜಿದಾರಳು ಅಧಿಕೃತ ಪ್ರಮಾಣಪತ್ರವನ್ನು ಪಡೆಯಲು ಪುರಸ್ಕೃತಳಾಗಿರುತ್ತಾಳೆ.

ತದನುಸಾರವಾಗಿ ಮೇಲೆ ಹೇಳಲಾದ ಅಭಿಪ್ರಾಯೋಕ್ತಿಗಳೊಂದಿಗೆ, ಅರ್ಜಿಯನ್ನು ಪುರಸ್ಕರಿಸಲಾಗಿದೆ.